264

ತಾರೀಖು 10ನೇ ಫಿಬ್ರವರೀ 1887.

ನಂ. 245.—1886ನೇ ಇಸವಿ ಡಿಕಂಬರ್ 22ನೇ ಮಕ್ಕಂ 1461ನೇ ನಂಬರ್ ಇಸ್ತಿಹಾರ್‌ನಾಮೆಯ 2ನೇ ಪ್ಯಾರಾ ಅನುಸರಿಸಿ ಮೈಸೂರು ಸೀಮೆಯಲ್ಲಿ ಜಮ್ಮಿ ಪಡೆಯುವದಕ್ಕೆ ಗವರ್ಮೆಂಟಿನ ಮಂಜೂರಾತಿಗೋಸ್ಕರ ದರಖಾಸ್ತು ಕಳುಹಿಸುವ ಆಫೀಸರುಗಳು, ಅವರ ದರಖಾಸ್ತಿನೊಂದಿಗೆ ಇದರಡೀ ಕಂಡ ತಪಶೀಲ್‌ಗಳ ಅಡಗಿರುವ ಒಂದು ತಖ್ತೆಯನ್ನು ಕಳುಹಿಸತಕ್ಕದ್ದು.

1. ದರಖಾಸ್ತು ಮಾಡುವ ಆಫೀಸರರ ಹೆಸರು ಮತ್ತು ಉದ್ಯೋಗದ ಹೆಸರು.
2. ಪಡೆಯುವದಕ್ಕೆ ಉದ್ದೇಸಿಸಲ್ಪಟ್ಟ ಜಮ್ಮಿ ಇರತಕ್ಕ ತಾಲ್ಲೂಕು ಮತ್ತು ಗ್ರಾಮದ ಹೆಸರು.
3. ತರೀಯೇ ಖುಷ್ಕಿಯೇ ಅಥವಾ ಬಾಗಾಯತೇ.
4. ಸರ್ಕಾರ್ ಅಥವಾ ಇನಾಮೆ.
5. ಬೀಜವರಿ, ವ ಕಂಡಾಯವೇನಾದರೂ ಇದ್ದರೆ ಅದು.
6. ಖರೀದಿ ಮೂಲಕವೇ ಆಧಾರದ ಮೂಲಕವೇ ದಾನ ವಗೈರೆ ಮೂಲಕವಾಗಿಯೇ ಯೆಂಬ ತಪಶೀಲು.
7. ಪ್ರತಿಫಲವೇನಾದರೂ ಇದ್ದರೆ ಅದು.

ತಾರೀಖು 14ನೇ ಫಿಬ್ರವರೀ 1887.

ನಂ. 246.—ದಿವಾನರವರ ಆಫೀಸಿನ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯಂ. ನಾರಾಯಣರಾಯರಿಗೆ, 1887ನೇ ಇಸವಿ ಫಿಬ್ರವರೀ 3ನೇ ಮಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ನೊದಲು ಮೂರುವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಡಿಕಂಬರ್ 1886.

ಕ್ಯಾಂಪ್ ನಂಬರ್ 1461.—ಸರ್ಕಾರ್ ನವ್ಹಕರರು ಜಮ್ಮಿ ಉಂಟಾಗಿರುವ ವಿಷಯದಲ್ಲಿ 1870ನೇ ಇಸವಿ ಜುಲೈ 6ನೇ ಮಕ್ಕಂ 123ನೇ ನಂಬರು ಮತ್ತು ಅದೇ ಇಸವಿ ನವಂಬರ್ 10ನೇ ಮಕ್ಕಂ 260ನೇ ನಂಬರು ಈ ಇಸ್ತಿಹಾರ್‌ನಾಮೆಗಳಿಂದ ಬದಲಾಯಿಸಲ್ಪಟ್ಟಂತೆ 1863ನೇ ಇಸವಿ ಮೇ 29ನೇ ಮಕ್ಕಮಿಸ ರೂಲ್ಸ್‌ಗಳಿಗೆ ತಮಾಂ ಸರ್ಕಾರ್ ನವ್ಹಕರರೂ ನಿಗೇ ಕೊಡತಕ್ಕದ್ದು. ಸದರೀ ರೂಲ್ಸ್‌ಗಳ ಅಮಲ್ ಚಲಾವಣಿ ದೆಕೆಯಿಂದ ತಪ್ಪಿಸಿಕೊಳ್ಳುವದಕ್ಕೆ ಯಾರಾದರೂ ಪ್ರಯತ್ನ ಪಟ್ಟರೆ, ಅಂಥಾ ತಪ್ಪಿತಸ್ಥನು ಸರ್ಕಾರ್ ನವ್ಹಕರಿಯಿಂದ ತಗ್ಗೈರ್ ಮಾಡಲ್ಪಡಲಿಕ್ಕಾಗಲೀ ಗವರ್ಮೆಂಟಿನವರು ಯುಕ್ತವೆಂದು ಭಾವಿಸುವಂಥಾ ಇತರ ಯಾವದಾದರೂ ಇಲಾಖೇ ಮೂಲಕವಾದ ಶಿಕ್ಷೆಗಾಗಲಿ ಗುರಿಯಾಗುವದಕ್ಕೆ ಒಳಪಡತಕ್ಕದ್ದು.

2. ಗವರ್ಮೆಂಟಿನಿಂದ ಸಾಧಾರಣವಾಗಿ ಮೊಕರರ್ರಾಡಲ್ಪಡುವ ಆಫೀಸರುಗಳ ವಿಷಯದಲ್ಲಿ ಅವರುಗಳು, ಖುದ್ದಾಗಿಯಾಗಲೀ ಪರೋಕ್ಷವಾಗಿಯಾಗಲೀ ತಮ್ಮ ಹೆಸರಿನಲ್ಲಿಯಾದರೂ ಅಥವಾ ತಮಿಗೋಸ್ಕರ ಇತರರ ಹೆಸರಿನಲ್ಲಿಯಾದರೂ ಯಾವದಾದರೂ ಭೂಸ್ಥಿತಿಯನ್ನಾಗಲೀ ಅಥವಾ ಅದರಲ್ಲಿ ಯಾವ ಸಂಬಂಧವನ್ನಾಗಲೀ ಖುಷ್ಕಿಖರ್ಚಿದಿ ಮೂಲಕವಾದರೂ ಆಧಾರವಾಗಿಯಾದರೂ ವರ್ಗಮೂಲಕವಾದರೂ ಅಥವಾ ಇನ್ಯಾವಮೂಲಕವಾದರೂ ಪಡೆಯುವದಕ್ಕೆ ಮುಂಚಿತವಾಗಿ ಗವರ್ಮೆಂಟಿನವರ ಮಂಜೂರಾತಿಯನ್ನು ಪಡೆಯತಕ್ಕದ್ದು. ಅಂಥಾ ಆಫೀಸರುಗಳ ವಿಷಯದಲ್ಲಿ ಅವರುಗಳ ಸ್ವಾಧೀನಕ್ಕೆ ಭೂಸ್ಥಿತಿಯಾಗಲೀ ಅದರಲ್ಲಿ ಸಂಬಂಧವಾಗಲೀ ಪಿತರಾರ್ಜಿತ ಹಕ್ಕಿನಮೂಲಕವಾದರೂ ಯಾ ದಾಯಭಾಗದ ಮೂಲಕವಾದರೂ ಪಡೆದಾಗ, ಡೆಪ್ಯೂಟಿ ಕಮ್ಮಿಷ್ಣರವರು, 1863ನೇ ಇಸವಿ ಮೇ 29ನೇ ಮಕ್ಕಂ ವುಳ್ಳ ಇಸ್ತಿಹಾರ್‌ನಾಮೆಯ 3ನೇ ಕಲಂ ಅನುಸರಿಸಿ ಕಿಡುವಳಿ ಹಕ್ಕನ್ನು ರಿಜಿಸ್ಟರ್ ಮಾಡಿದ ತರುವಾಯ, ಸದರೀ ಸಂಗತಿಯನ್ನು ದಿವಾನರವರಿಗೆ ರಿಪೋರ್ಟು ಮಾಡತಕ್ಕದ್ದು.

ಹುಕ್ಕಂ ಬವೋಜೀವ್,
ಆರ್. ವಿಜಯೀಂದ್ರರಾವ್,
ಜೇಫ್ ಸೆಕ್ರಿಟೇರಿ.